# ಸಕಲ ಗ್ರಹ ಬಲ ನೀನೇ ಸರಸಿಜಾಕ್ಷ

ಸಂಸಾರದಲ್ಲಿರುವ ಭಕ್ತ ತನ್ನ ಮನೆಗೆಲಸ ಮಾಡುತ್ತಿರುವಾಗಲೂ ಪರಮಾತ್ಮನ ಸ್ಮರಣೆಯನ್ನು ಮರೆಯದೆ ಮಾಡಬೇಕು ಎಂದು ದಾಸರು ತಿಳಿಸಿದ್ದಾರೆ.

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 543.
2. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 162.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 215.
4. **Note:** The wordings mentioned without highlights are as per Ref. 1. The wordings in Ref. 3 are almost same except few differences which are given in yellow highlights.
5. **Note:** The lyrics in Ref. 2 are slightly different and those differences are marked in green highlights.

ರಾಗ: ಅಠಾಣ ತಾಳ: ಖಂಡ ಛಾಪು ರಾಗ: ಕಾಂಬೋಧಿ ತಾಳ: ಝಂಪೆ

ಸಕಲ ಗ್ರಹ ಬಲ ನೀನೆ ಸರಸಿಜಾಕ್ಷ
(ನಿಖಿಳ ರಕ್ಷಕ ನೀನೆ ವಿಶ್ವ ವ್ಯಾಪಕನೆ) || ಪ || (ನಿಖಿಳವೇತಕೆ ಎನಗೆ ವಿಶ್ವ ವ್ಯಾಪಕ ಮೋಹಿ)

ರವಿ ಚಂದ್ರ ಬುಧ ನೀನೆ ರಾಹು ಕೇತುವು ನೀನೆ
ಕವಿ ಗುರು ಶನಿಯು ಮಂಗಳನು ನೀನೆ
ದಿವ (ದಿವಸ) ರಾತ್ರಿಯು ನೀನೆ ನವ ವಿಧಾನವು ನೀನೆ
ಭವರೋಗ ಹರ ನೀನೆ (ಭೇಷಜನು) (ರಕ್ಷಕನು) ನೀನೆ || ೧ ||

ಪಕ್ಷ ಮಾಸವು ನೀನೆ ಪರ್ವ ಕಾಲವು ನೀನೆ
ನಕ್ಷತ್ರ ಯೋಗ ತಿಥಿ ಕರಣ ನೀನೆ
ಅಕ್ಷಯವೆಂದು ದ್ರೌಪದಿಯ ಮಾನವ ಕಾಯ್ದ

ಪಕ್ಷಿ ವಾಹನ ದೀನ ರಕ್ಷಕನು ನೀನೆ ‖ ೨ ‖

ಋತು ವತ್ಸರವು ನೀನೆ (ವ್ರತ ಯುಗಾದಿಯು)* ನೀನೆ
ಕೃತು ಹೋಮ ಯಜ್ಞ ಸದ್ಗತಿಯು ನೀನೆ
ಜಿತವಾಗಿ ಎನ್ನೊಡೆಯ ಪುರಂದರ ವಿಠಲನೆ
ಶೃತಿಗೆ ಸಿಲುಕದ ಅಪ್ರತಿಮ (ಮಹಾ) ಮಹಿಮ ನೀನೆ ‖ ೩ ‖

ಋತು ಕಾಲಗಳು ನೀನೆ ವ್ರತ ದಿನಂಗಳು ನೀನೆ
ಕೃತುವು ಸಂಧ್ಯಾನ ಸದ್ಗತಿಯು ನೀನೆ
ಜಿತವಾಗಿ ಎನ್ನೊಡೆಯ ಪುರಂದರ ವಿಠಲನೆ
ಶೃತಿಗೆ ನಿಲುಕದ ಮಹಾತ್ಮನು ಹರಿಯು ನೀನೆ

*( ಪೃಥಿವಿಗಾದಿಯು)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಕವಿ** – ಶುಕ್ರ.

**ದಿವರಾತ್ರಿ** – ಹಗಲು ಇರುಳು.

**ನವ ವಿಧಾನ** – ವಿಧಾನವೆಂದರೆ ವೇದಾದಿಶಾಸ್ತ್ರಗಳು; ಆರು ವೇದಾಂಗಗಳು (ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ), ಮೀಮಾಂಸಾ, ನ್ಯಾಯ, ವ್ಯಾಕರಣ.

**ಭೇಷಜ** – ಔಷಧ.

**ಪಕ್ಷ ಮಾಸ** – ದೇವಕಾರ್ಯಕ್ಕೂ ಪಿತೃಕಾರ್ಯಕ್ಕೂ ಪ್ರಶಸ್ತವಾದ ಪಕ್ಷ (ಚಂದ್ರನ ಹದಿನೈದು ಕಲೆಗಳು) ಎಂಬ ಕಾಲ.

**ಪರ್ವ ಕಾಲ** – ಚತುರ್ದಶಿ, ಅಷ್ಟಮಿ, ಅಮಾವಾಸ್ಯೆ, ಹುಣ್ಣಿಮೆ, ಸೂರ್ಯ ಸಂಕ್ರಾಂತಿ (ಸಂಕ್ರಮಣ) ಇವು ಪರ್ವಕಾಲಗಳೆಂದು ಬ್ರಹ್ಮ ಪುರಾಣದ ಎಣಿಕೆ.

**ನಕ್ಷತ್ರ, ಯೋಗ, ತಿಥಿ, ಕರಣ** – ಈ ನಾಲ್ಕಕ್ಕೆ ವಾರವನ್ನು ಸೇರಿಸಿ ಪಂಚಾಂಗವೆಂದು ಕರೆಯುತ್ತಾರೆ.

**ವತ್ಸರ** – ವರ್ಷ.

**ಕ್ರತು** – ಯೂಪ ಸಹಿತವಾಗಿ ಸೋಮ ಸಾಧ್ಯವಾದ ಯಜ್ಞ.

**ಹೋಮ** – ಪಂಚಮಹಾ ಯಜ್ಞಗಳಲ್ಲಿ ಒಂದು, ದೇವ ಯಜ್ಞ; ವಿಧಿ ಪೂರ್ವಕವಾಗಿ ಅಗ್ನಿಯಲ್ಲಿ ಎಡೆಯನ್ನು ಹಾಕುವುದು.

**ಯಜ್ಞ –** ಯಾಗಾದಿಗಳು; ಅಧ್ಯಾಪನವು ಬ್ರಹ್ಮ ಯಜ್ಞವೆಂದೂ, ತರ್ಪಣವು ಪಿತೃ ಯಜ್ಞವೆಂದೂ, ಹೋಮವು ದೇವ ಯಜ್ಞವೆಂದೂ, ಬಲಿ ಭೂತ ಯಜ್ಞವೆಂದೂ, ಅತಿಥಿ ಪೂಜೆಯು ಮನುಷ್ಯ ಯಜ್ಞವೆಂದೂ ಪಂಚ ಯಜ್ಞಗಳು (ಗಾರುಡ ಪುರಾಣ 115).

**ಸದ್ಗತಿ –** ಸ್ವರ್ಗ, ಮೋಕ್ಷ.

**ಜಿತವಾಗಿ –** 'ಜಿತ' ಎನ್ನುವುದು 'ಸ್ಥಿತ' ಎಂಬ ಸಂಸ್ಕೃತ ಮಾತಿನ ತದ್ಭವ; ಸ್ಥಿರವಾಗಿ, ಎಡೆಬಿಡದೆ.

**Classification:** Keerthane
**Ankita:** Purandara Vittala
**Location:** NA
**Category:** Vishnu Stuti, Hari Sarvottama, navaratna malike, Aartha Bhava
**Sub-Category:** graha, Vishnu, loka, bhava, roga, yoga, draupadi, surya, Chandra, Akshaya, pakshi, bhumi, shruti, krishna
**Pravachana:** NA
**Explanation:** NA